


بسم اللهِ الرّحمٰن الرّحيم

# ಖಿಲಾಫತ್: ಅಲ್ಲಾಹನ ಶ್ರೇಷ್ಠ ವರದಾನ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–05–2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಈ ಲೋಕವನ್ನು ಬಿಟ್ಟು ಹೋಗಬೇಕಾದ ಸಮಯ ಸಮೀಪವಾಗಿದೆ ಎಂದು ಅಲ್ಲಾಹನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿಸಿದಾಗ ಅವರು ಜಮಾಅತನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು: ಅಲ್ಲಾಹನು ಎರಡು ವಿಧ ಶಕ್ತಿಯನ್ನು ಪ್ರಕಟಗೊಳಿಸುತ್ತಾನೆ. ಮೊದಲನೆಯದಾಗಿ, ಪ್ರವಾದಿಗಳ ಕೈಗಳಿಂದಲೇ ತನ್ನ ಶಕ್ತಿಯನ್ನು ತೋರಿಸುತ್ತಾನೆ. ಎರಡನೆಯದು ಪ್ರವಾದಿಯ ಮರಣದ ನಂತರ ಕಷ್ಟತೆಗಳು ಮುಂದೆ ಬರುವ ಸಮಯದಲ್ಲಿ. ಅಂತಹ ಸಮಯದಲ್ಲಿ ಶತ್ರುಗಳು ಬಲಗೊಳ್ಳುತ್ತಾರೆ. ಈಗ ಎಲ್ಲವೂ ಮುಗಿಯಿತು ಹಾಗೂ ಈ ಜಮಾಅತ್ ನಾಶವಾಗುವುದು ಎಂದು ಶತ್ರುಗಳು ಭಾವಿಸುತ್ತಾರೆ. ಸ್ವತಃ ಜಮಾಅತಿನ ಜನರು ಕೂಡ ಚಂಚಲಗೊಳ್ಳುತ್ತಾರೆ ಮತ್ತು ಅವರ ಸೊಂಟಗಳು ಮುರಿದು ಹೋಗುತ್ತವೆ ಹಾಗೂ ಅನೇಕ ದೌರ್ಭಾಗ್ಯವಂತರು ಧರ್ಮತ್ಯಾಗದ ಮಾರ್ಗವನ್ನು ಅವಲಂಬಿಸುತ್ತಾರೆ. ಆಗ ಅಲ್ಲಾಹನು ಮತ್ತೊಮ್ಮೆ ತನ್ನ ಪ್ರಬಲವಾದ ಶಕ್ತಿಯನ್ನು ಪ್ರಕಟಗೊಳಿಸುತ್ತಾನೆ ಮತ್ತು ಬೀಳುತ್ತಿರುವ ಜಮಾಅತನ್ನು ರಕ್ಷಿಸುತ್ತಾನೆ. ಆದ್ದರಿಂದ ಯಾರು ಕೊನೆಯ ತನಕ ಸಹನೆ ಕೈಗೊಳ್ಳುತ್ತಾರೋ ಅವರು ಅಲ್ಲಾಹನ ಈ ಪವಾಡವನ್ನು ನೋಡುತ್ತಾರೆ. ಇದೇ ಹಝ್ರತ್ ಅಬೂಬಕರ್ ಸಿದ್ದೀಖ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ನಡೆಯಿತು. ಆಗ ಹಝ್ರತ್ ಪೈಗಂಬರ್(ಸ)ರ ಮರಣವನ್ನು ಅಕಾಲಿಕವಾದ ಮರಣವೆಂದು ಭಾವಿಸಲಾಗುತ್ತಿತ್ತು. ಮರಳುಗಾಡಿನ ಅನೇಕ ಗ್ರಾಮವಾಸಿಗಳು ಧರ್ಮವನ್ನು ತ್ಯಜಿಸಿದರು. ಸಹಾಬಿಯರು ಕೂಡ ದುಃಖದಿಂದ ಹುಚ್ಚರಂತೆ ಆದರು. ಆಗ ಅಲ್ಲಾಹನು ಹಝ್ರತ್ ಅಬೂಬಕರ್ ಸಿದ್ದೀಖ್(ರ)ರನ್ನು ಎಬ್ಬಿಸಿ ಪುನಃ ತನ್ನ ಶಕ್ತಿಯ ಮಾದರಿಯನ್ನು ತೋರಿಸಿದನು. ಇಸ್ಲಾಮನ್ನು ನಾಶದ ಅಂಚಿನಿಂದ ರಕ್ಷಿಸಿದನು. ಭಯದ ನಂತರ ಪುನಃ ಅವರ ಕಾಲುಗಳನ್ನು ಬಲಪಡಿಸುವೆನು ಎಂಬ ತನ್ನ ವಾಗ್ದಾನವನ್ನು ಅಲ್ಲಾಹನು ಈಡೇರಿಸಿದನು.

ಇದೇ ರೀತಿಯಲ್ಲಿ ಹಝ್ರತ್ ಮೂಸಾ(ಅ)ರ ಕಾಲದಲ್ಲಿ ಆಗಿತ್ತು. ಬನೀ ಇಸ್ರಾಯೀಲರೊಡನೆ ಮಾಡಲಾದ ವಾಗ್ದಾನದ ಪ್ರಕಾರ ತಲುಪಬೇಕಾದ ಸ್ಥಳಕ್ಕೆ ಮುಟ್ಟುವುದಕ್ಕೆ ಮುಂಚಿತವಾಗಿ ಈಜಿಪ್ಟ್ ಮತ್ತು ಕನಾನಿನ ಮಾರ್ಗ ಮಧ್ಯೆ ಮೂಸಾ(ಅ) ಮೃತಪಟ್ಟರು. ಆಗ ಬನೀ ಇಸ್ರಾಯೀಲರಲ್ಲಿ ಶೋಕದ ಸ್ಥಿತಿ ಉಂಟಾಯಿತು ಮತ್ತು ಅವರು ನಲ್ವತ್ತು ದಿನಗಳಷ್ಟು ಕಾಲ ರೋದಿಸಿದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಎರಡನೇ ಶಕ್ತಿ ಪ್ರಕಟಣೆಯನ್ನು ಕೂಡ ನೀವು ನೋಡಬೇಕು ಎಂಬುದು ಆವಶ್ಯ ಮತ್ತು ಅದರ ಆಗಮನ ನಿಮಗೆ ಉತ್ತಮ. ಏಕೆಂದರೆ ಅದು ಸ್ಥಾಯಿಯಾಗಿರುವುದು. ಅದರ ಪರಂಪರೆ ಖಿಯಾಮತ್ ತನಕ ಮುರಿಯದು. ಆದರೆ ನಾನು ಹೊರಟು ಹೋಗುವ ತನಕ ಆ ಎರಡನೇ ಶಕ್ತಿ ಪ್ರಭಾವ ಬರದು. ನಾನು ಹೋದ ನಂತರ ಅಲ್ಲಾಹನು ಆ ಎರಡನೇ ಶಕ್ತಿ ಪ್ರಭಾವವನ್ನು ನಿಮಗಾಗಿ ಕಳುಹಿಸುವನು. ಅದು ಸದಾ ನಿಮ್ಮ ಜೊತೆಗೆ ಇರುವುದು. ಅದರ ಬಗ್ಗೆ ಬರಾಹೀನೆ ಅಹ್ಮದಿಯದಲ್ಲಿ ಅಲ್ಲಾಹನ ವಾಗ್ದಾನವಿದೆ.

ಒಟ್ಟಿನಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ನಿಧನಗೊಂಡಾಗ ಅಲ್ಲಾಹನು ತನ್ನ ವಾಗ್ದಾನಗಳ ಪ್ರಕಾರ ಹಝ್ರತ್ ಮೌಲಾನಾ ನೂರುದ್ದೀನ್ ಸಾಹಿಬ್(ರ)ರ ಕೈಯಲ್ಲಿ ಜಮಾಅತನ್ನು ಒಟ್ಟು ಸೇರಿಸಿದನು. ಅಂಜುಮನಿನ ಅಧೀನದಲ್ಲಿ ವ್ಯವಸ್ಥೆ ನಡೆಯಬೇಕು ಎಂದು ಕೆಲವು ಜನರು ಬಯಸುತ್ತಿದ್ದರು. ಆದರೆ ಅವರು ಉಕ್ಕಿನ ಮುಷ್ಟಿಯಿಂದ ಆ ಪಿತೂರಿಯನ್ನು ಕೊನೆಗೊಳಿಸಿದರು. ಅನಂತರ ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿ(ರ) ಖ಼ಿಲಾಫತ್ ಸ್ಥಾನಕ್ಕೆ ಬಂದರು. ಆ ಸಂದರ್ಭದಲ್ಲೂ ಕಪಟವಿಶ್ವಾಸಿಗಳು ಜಮಾಅತಿನಲ್ಲಿ ಬಿರುಕು ಉಂಟುಮಾಡಲು ಪ್ರಯತ್ನಿಸಿದರು. ಆದರೆ ಅಲ್ಲಾಹನು ಸತ್ಯವಿಶ್ವಾಸಿಗಳ ಜಮಾಅತನ್ನು ಒಂದು ಕೈಯಲ್ಲಿ ಒಟ್ಟು ಸೇರಿಸಿದನು ಮತ್ತು ಎದುರಾಳಿಗಳು ಪರಾಜಿತರಾದರು. ಅವರ ನಂತರ ಮೂರನೇ ಖ಼ಿಲಾಫತ್ ಕಾಲ ಮತ್ತು ಅದರ ನಂತರ ನಾಲ್ಕನೇ ಖ಼ಿಲಾಫತಿನ ಕಾಲ ಆರಂಭವಾಯಿತು.

(ಅನಂತರ ಬಹಳ ವಿನಯ ಮತ್ತು ನಮ್ರತೆಯಿಂದ ಹುಝೂ಼ರ್ ಹೇಳಿದರು:) ಅಲ್ಲಾಹನು ನನ್ನನ್ನು ಈ ಸ್ಥಾನದಲ್ಲಿ ಇರಿಸಿಕೊಂಡು ಹಝ್ರತ್ ಮಸೀಹ್ ಮೌಊದ್(ಅ)ರೊಡನೆ ಮಾಡಿದ ವಾಗ್ದಾನಗಳ ಪ್ರಕಾರ ಜಮಾಅತನ್ನು ಪ್ರಗತಿಯ ಮಾರ್ಗದಲ್ಲಿ ಇರಿಸಿದನು. ಶತ್ರುಗಳು ಭಿನ್ನತೆ ಉಂಟುಮಾಡಲು ಅನೇಕ ಪ್ರಯತ್ನಗಳನ್ನು ಮಾಡಿದರು, ಅಹ್ಮದಿಯರನ್ನು ಶಹೀದ್ ಮಾಡಲಾಯಿತು, ಲೌಕಿಕವಾದ ಲಾಲಸೆಗಳನ್ನು ತೋರಿಸಲಾಯಿತು. ಆದರೆ ಅಲ್ಲಾಹನು ಪೂರ್ತಿ ಲೋಕದ ಅಹ್ಮದಿಯರ ನಂಬಿಕೆ ಮತ್ತು ದೃಢವಿಶ್ವಾಸವನ್ನು ವರ್ಧಿಸುತ್ತಾ ಹೋದನು.

ಅಹ್ಮದಿಯರಿಗೆ ಖ಼ಿಲಾಫತಿನೊಂದಿಗೆ ಇರುವ ಸಂಬಂಧವನ್ನು ಅಲ್ಲಾಹನಿಗೆ ಮಾತ್ರ ಉಂಟುಮಾಡಲು ಸಾಧ್ಯ. ಜಮಾಅತಿನ ಸದಸ್ಯರಿಗೆ ಖ಼ಿಲಾಫತಿನೊಂದಿಗೆ ಮತ್ತು ಖ಼ಲೀಫರಿಗೆ ಜಮಾಅತಿನ ಸದಸ್ಯರೊಂದಿಗೆ ಇರುವಂತಹ ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಉಂಟುಮಾಡಲು ಯಾವನೇ ಮನುಷ್ಯನಿಗೆ ಸಾಧ್ಯವಲ್ಲ. ನಾನು ಯಾವ ದೇಶಕ್ಕೆ ಹೋದರೂ ಅಲ್ಲಿ ಈ ದೃಶ್ಯಗಳು ಕಾಣಬಹುದಾಗಿದೆ. ಇದು ಕೇವಲ ಬಾಯಿಮಾತಲ್ಲ. ಬದಲಾಗಿ ಇಂದಂತೂ ಕ್ಯಾಮೆರಾದ ಕಣ್ಣು ಅವುಗಳನ್ನು ಸೆರೆ

ಹಿಡಿಯುತ್ತದೆ. ಎಂ.ಟಿ.ಎ. ಈ ದೃಶ್ಯಗಳನ್ನು ತೋರಿಸುತ್ತಿರುತ್ತದೆ. ಅಲ್ಲಾಹನ ಕ್ರಿಯಾರೂಪದ ಸಾಕ್ಷ್ಯ ನಿಮ್ಮ ಜೊತೆಗೆ ಇದೆ ಎಂದು ಅವುಗಳನ್ನು ನೋಡಿಕೊಂಡು ಶತ್ರುಗಳಿಗೂ ಹೇಳಬೇಕಾಗುತ್ತಿದೆ. ಖಿಲಾಫತಿನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯನ್ನು ವ್ಯಕ್ತಪಡಿಸಿಕೊಂಡು ನನಗೆ ಸಾವಿರಾರು ಪತ್ರಗಳು ಬರುತ್ತವೆ. ಅಲ್ಲಾಹನು ಹೇಗೆ ಸ್ವತಃ ಜನರನ್ನು ಖಿಲಾಫತಿನೊಂದಿಗೆ ಜೋಡಿಸುತ್ತಾನೆ ಮತ್ತು ಹೇಗೆ ಅವರ ಹೃದಯಗಳಲ್ಲಿ ಖಿಲಾಫತಿನೊಂದಿಗೆ ಪ್ರೀತಿಯನ್ನು ಉಂಟುಮಾಡುತ್ತಾನೆ ಎಂಬುದನ್ನು ಸ್ಪಷ್ಟಪಡಿಸುವ ಕೆಲವು ಪತ್ರಗಳ ಉದಾಹರಣೆಗಳನ್ನು ನಾನು ನಿಮ್ಮ ಮುಂದೆ ಇರಿಸುತ್ತೇನೆ.

ತನ್ಸಾನಿಯದ ಮುಅಲ್ಲಿಂ ಸಾಹಿಬ್ ಬರೆಯುತ್ತಾರೆ: ಒಂದು ದಿನ ಮಸೀದಿಯ ಮೆಟ್ಟಿಲುಗಳಲ್ಲಿ ಮಹಿಳೆಯೊಬ್ಬಳನ್ನು ನೋಡಿದೆನು. ಅಹ್ಮದಿಯೇತರಲ್ಲಿ ದಮ್ ಮತ್ತು ದುರೂದ್ ಮಾಡುವ ವಾಡಿಕೆಯಿರುವ ರೀತಿಯಲ್ಲಿ ದುಆ ಮಾಡಿಸಲು ಬಂದಿದ್ದಳು. ಹೇಗಿದ್ದರೂ ನಾವು ಅವಳಿಗೆ ಜಮಾಅತಿನ ಅಧ್ಯಾಪನೆಯನ್ನು ತಿಳಿಸಿದೆವು ಮತ್ತು ದುಆ ಕೂಡ ಮಾಡಿದೆವು. ಉದ್ದ ಗಡ್ಡವಿರುವ ವ್ಯಕ್ತಿಯನ್ನು ನಾನು ಕನಸಿನಲ್ಲಿ ಕಾಣುತ್ತಿರುತ್ತೇನೆ ಎಂದು ಅವಳು ಹೇಳಿದಳು. ಹೀಗೆ ಅವರಿಗೆ ಜಮಾಅತಿನ ಬಗ್ಗೆ ಪರಿಚಯಪಡಿಸಿ ಕೊಡಲಾಯಿತು. ಹಝ್ರತ್ ಮಸೀಹ್ ಮೌಊದ್[ಅ] ಮತ್ತು ಖಲೀಫರ ಫೋಟೋಗಳನ್ನು ತೋರಿಸಲಾಯಿತು. ಈ ಮಹನೀಯ ವ್ಯಕ್ತಿಯನ್ನೇ ನಾನು ಕನಸಿನಲ್ಲಿ ಕಾಣುತ್ತಿದ್ದೆ ಎಂದು ಹಝ್ರತ್ ಮಸೀಹ್ ಮೌಊದ್[ಅ]ರ ಫೋಟೋವನ್ನು ನೋಡಿದಾಗ ಹೇಳಿದಳು.

ಇಂಡೋನೇಶಿಯದ ಒಂದು ಪ್ರದೇಶದ ನಿವಾಸಿಯಾದ ಅಬ್ದುಲ್ಲಾಹ್ ಸಾಹಿಬ್‌ರಿಗೆ ಜಮಾಅತಿನೊಂದಿಗೆ ಸಂಪರ್ಕವಿತ್ತು. ನಮ್ಮ ಮೌಲವಿ ಸಾಹಿಬರ ಸಂಪರ್ಕವಿದ್ದ ಕಾರಣದಿಂದ ವಿರೋಧಿಗಳು ಅವರ ಮೇಲೆ ಆರೋಪವನ್ನು ಹೊರಿಸಿದರು ಮತ್ತು ಅವರನ್ನು ಅವರ ಮಸೀದಿಗೆ ಹೋಗುವುದರಿಂದ ತಡೆದರು. ಅವರು ಒಂದು ಕನಸಿನಲ್ಲಿ ನಾಶಮಾಡುವಂತಹ ಸುಳಿಯಲ್ಲಿ ಸಿಲುಕಿರುವುದಾಗಿ ಕಂಡರು. ಅನಂತರ ಅವರು ಹಝ್ರತ್ ಮಸೀಹ್ ಮೌಊದ್[ಅ]ರ ಫೋಟೋವನ್ನು ನೋಡಿದ ನಂತರ ಹೀಗೆ ಹೇಳಿದರು: ನನ್ನನ್ನು ಆ ಸುಳಿಯಿಂದ ರಕ್ಷಿಸಿದ್ದು ಇವರೇ ಆಗಿರುವರು. ಅವರ ಪುತ್ರ ಸಹ ಕನಸನ್ನು ಕಂಡಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್[ರಹ್], ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್[ರಹ್] ಮತ್ತು ನನ್ನ ಫೋಟೋಗಳನ್ನು ನೋಡಿ ಅವರು ಹೇಳಿದರು: ಇವರೇ ನನ್ನನ್ನು ರಕ್ಷಿಸಿದ್ದರು. ಅಬ್ದುಲ್ಲಾಹ್ ಸಾಹಿಬ್ ತನ್ನ ಕುಟುಂಬ ಸಮೇತ ಬೈಅತ್ ಮಾಡಿದರು.

ಮಾಲಿಯ ಮಹಿಳೆಯೊಬ್ಬಳು ಅಹ್ಮದಿಯಾಗುವುದಕ್ಕೆ ಮುಂಚೆ ಕನಸಿನಲ್ಲಿ ಎರಡು ಶಬ್ದಗಳನ್ನು ಕೇಳುತ್ತಿದ್ದರು. ಒಂದು ಪವಿತ್ರ ಖುರ್‌ಆನ್ ಪಾರಾಯಣದ ದನಿ, ಮತ್ತೊಂದು ಅಲ್ಲಿಯ ಮುಅಲ್ಲಿಮರ ದನಿ. ಜಮಾಅತಿನ ರೇಡಿಯೋದಲ್ಲಿ ನನ್ನ ಖುತ್ಬಗಳನ್ನು ಮತ್ತು ಇತರ ಕಾರ್ಯಕ್ರಮಗಳನ್ನು ಆಲಿಸಿದಾಗ ಅವರು ಹೇಳಿದರು: ಇವೇ ಶಬ್ದಗಳನ್ನು ನಾನು ಕನಸಿನಲ್ಲಿ ಕೇಳುತ್ತಿದ್ದೆ. ಅನಂತರ ಅವರು ಬೈಅತ್ ಮಾಡಿದರು.

ಕೇಮರೂನಿನ ಯುವಕನೊಬ್ಬ ಹೇಳುತ್ತಾನೆ: ಕೆಲವು ವರ್ಷಗಳ ಹಿಂದೆ ನಾನು ಕನಸಿನಲ್ಲಿ ಇಬ್ಬರು ಮಹನೀಯರನ್ನು ಕಂಡಿದ್ದೆ. ಕೆಲವು ದಿನಗಳ ನಂತರ ಪೇಟೆಯಲ್ಲಿ ಒಬ್ಬ ಯುವಕ ಜಮಾಅತಿನ ಲೀಫ್‌ಲೆಟ್ ವಿತರಣೆ ಮಾಡುತ್ತಿದ್ದನು. ಅದರಲ್ಲಿ ಹಝ್ರತ್ ಮಸೀಹ್ ಮೌಊದ್[ಅ]ರ ಫೋಟೋ ಇತ್ತು. ಅವರನ್ನೇ ನಾನು ಕನಸಿನಲ್ಲಿ ಕಂಡಿದ್ದೆ. ಜಮಾಅತನ್ನು ಸಂಪರ್ಕಿಸಿ ಪುಸ್ತಕಗಳನ್ನು ಓದಿದಾಗ ಅವುಗಳಲ್ಲಿ ಮತ್ತೊಂದು ಫೋಟೋ ಸಹ ಕಂಡೆನು. ಅದು ಈಗಿನ ಖಲೀಫರ ಫೋಟೋ ಆಗಿತ್ತು. ನಮಾಝ್ ನಿರ್ವಹಿಸಲು ಅವರು ನನ್ನೊಡನೆ ಕನಸಿನಲ್ಲಿ ಹೇಳಿದ್ದರು. ಅಹ್ಮದಿಯ್ಯತ್ ಸ್ವೀಕಾರ ಮಾಡಿದ ನಂತರ ಪ್ರದೇಶದ ಚೀಫ್ ಮೃತಪಟ್ಟಾಗ ನನ್ನನ್ನು ಪ್ರದೇಶದ ಚೀಫನ್ನಾಗಿ ಮಾಡಲಾಯಿತು. ನನಗೆ ಈ ಎಲ್ಲ ಅನುಗ್ರಹಗಳು ಜಮಾಅತಿನಲ್ಲಿ ಪ್ರವೇಶಿಸಿದ ಕಾರಣದಿಂದ ಲಭಿಸಿವೆ.

ಗಿನಿಬಸಾವಿನ ಮಹಿಳೆಯಾದ ಆಯಿಶ ಮಾರಿಯ ಸಾಹಿಬ ಎಂಬವರ ಇಬ್ಬರು ಪುತ್ರರು ಅಹ್ಮದಿಯ್ಯತ್ ಸ್ವೀಕಾರ ಮಾಡಿದರು. ಅವರ ಹಿರಿಯ ಸಹೋದರ ಜಮಾಅತಿನ ವಿರೋಧಿಯಾಗಿರುವರು. ಅವರೇ ಈ ಕುಟುಂಬವನ್ನು ಸಲಹುತ್ತಿದ್ದರು. ಅಹ್ಮದಿಯ್ಯತ್ ಬಿಡದಿದ್ದರೆ ನಿಮ್ಮೊಂದಿಗೆ ನನ್ನ ಯಾವುದೇ ಸಂಬಂಧ ಇರದು ಎಂದು ಅವರು ಎಚ್ಚರಿಸಿದರು. ಪುತ್ರರು ಹೇಳಿದರು: ನಮಗೆ ಅಲ್ಲಾಹನು ಸಾಕು. ನಾವು ಅಹ್ಮದಿಯ್ಯತ್ ಉಪೇಕ್ಷಿಸುವುದಿಲ್ಲ. ಎರಡು ದಿನಗಳ ನಂತರ ಮಹಿಳೆಯನ್ನು ಕನಸಿನಲ್ಲಿ ಹೀಗೆ ಸಮಾಧಾನಪಡಿಸಲಾಯಿತು: ಚಿಂತೆ ಮಾಡಬೇಡಿರಿ, ನಿಮ್ಮ ಪುತ್ರರು ಎಲ್ಲರಿಗಿಂತ ಮೇಲೆ ಇರುವರು. ಬೆಳಿಗ್ಗೆಯಾಗುತ್ತಲೇ ಆ ಮಹಿಳೆ ಮಿಶನರಿಯ ಬಳಿಗೆ ಹೋದಳು. ನನ್ನನ್ನು ಸಮಾಧಾನಪಡಿಸಿದ್ದು ಈ ಮಹನೀಯರೇ ಎಂದು ನನ್ನ ಫೋಟೋವನ್ನು ನೋಡಿದಾಗ ಅವಳು ಹೇಳಿದಳು. ಬೈಅತ್ ಮಾಡಿದ ನಂತರ ಅವರು ಬಹಳ ಕ್ರಿಯಾಶೀಲ ಅಹ್ಮದೀ ಮಹಿಳೆ ಆಗಿರುವರು.

ಕೆನ್ಯಾದ ಒಂದು ಪ್ರದೇಶವಾದ ಭಾಟಿಯಲ್ಲಿ ಬಹುತೇಕರು ಕ್ರೈಸ್ತರು. ಜಮಾಅತಿನ ವಿರೋಧಿಯಾದ ಮುಹಮ್ಮದ್ ಅಬ್ದಿ ಎಂಬ ಹೆಸರಿನ ವ್ಯಕ್ತಿ ಒಮ್ಮೆ ನಮ್ಮ ಸೆಂಟರಿಗೆ ನಮಾಝ್ ಮಾಡಲು ಬಂದರು. ಅವರಿಗೆ ಜಮಾಅತಿನ ಬಗ್ಗೆ ಪರಿಚಯಪಡಿಸಿ ಕೊಡಲಾಯಿತು. ಕೆಲವು ದಿನಗಳ ನಂತರ ಮುಅಲ್ಲಿಮ್ ಸಾಹಿಬ್‌ರ ವಸತಿಗೆ ಅವರು ಬಂದಾಗ ಎಂ.ಟಿ.ಎ.ಯಲ್ಲಿ ಖುತ್ಬ ನಡೆಯುತ್ತಿತ್ತು. ಖುತ್ಬ ಮುಗಿದ ಕೂಡಲೇ ಅವರು ಬೈಅತ್ ಮಾಡುವುದಾಗಿ ಹೇಳಿದರು. ಅವರೊಡನೆ ಕಾರಣವನ್ನು ಕೇಳಿದಾಗ ಅವರು ಹೀಗೆ ಹೇಳಿದರು: ಕಳೆದ ರಾತ್ರಿ ನಿದ್ದೆಯಿಂದ ಎದ್ದು ಅಂಗಳಕ್ಕೆ ಬಂದಾಗ ಆಕಾಶದಲ್ಲಿ ಬೆಳಗುವ ವಸ್ತುವನ್ನು ಕಂಡೆನು. ನನ್ನೊಳಗೆ ಅದರ ಆಳವಾದ ಪ್ರಭಾವ ಮತ್ತು ಗಾಂಭೀರ್ಯವಿತ್ತು. ಈ ಖುತ್ಬವನ್ನು ನೋಡಿದ ನಂತರ ರಾತ್ರಿ ನೋಡಿದ ದೃಶ್ಯ ಈಡೇರಿದಂತೆ ಆಯಿತು. ಹೀಗೆ ಪೂರ್ತಿ ಕುಟುಂಬ ಸಮೇತ ಅವರು ಜಮಾಅತಿಗೆ ಪ್ರವೇಶಿಸಿದರು.

ಸಿಯೆರಾಲಿಯೋನ್ ದೇಶದ ಇಬ್ರಾಹೀಂ ಎಂಬವರು ಎಂ.ಟಿ.ಎ.ದಲ್ಲಿ ನನ್ನ ಖುತ್ಬಗಳನ್ನು ಆಲಿಸಿದರು ಮತ್ತು

ಮೌಲವಿಗಳು ಕಲಿಸುತ್ತಿರುವುದು ಸುಳ್ಳು ಎಂದು ಘೋಷಿಸುತ್ತಾ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಮರು ತಮ್ಮ ಖುತ್ಬದಲ್ಲಿ ಪವಿತ್ರ ಖುರ್‌ಆನ್ ಮತ್ತು ಹದೀಸುಗಳನ್ನು ಉಲ್ಲೇಖಿಸುವುದನ್ನು ನಾನು ಸ್ವತಃ ಆಲಿಸಿದ್ದೇನೆ. ಅವರ ಕಲಿಮ ವಚನ ಕೂಡ ನಮ್ಮದೇ ಆಗಿದೆ. ಆದ್ದರಿಂದ ಅಹ್ಮದಿಯಾ ಜಮಾಅತ್ ಸುಳ್ಳಾಗಲು ಸಾಧ್ಯವಿಲ್ಲ. ಹೀಗೆ ಅವರು ಅಹ್ಮದಿಯಾ ಜಮಾಅತನ್ನು ಸ್ವೀಕಾರ ಮಾಡಿದರು.

ಕಾಂಗೋಕನ್ಸಾಸದಲ್ಲಿ ಅಹ್ಮದ್ ಸಾಹಿಬ್ ಎಂಬ ಹೆಸರಿನ ವ್ಯಕ್ತಿಯೊಬ್ಬರು ತಮ್ಮ ಎಂಟು ಸದಸ್ಯರನ್ನು ಒಳಗೊಂಡ ಕುಟುಂಬ ಸಮೇತ ಬೈಅತ್ ಮಾಡಿದರು ಮತ್ತು ತಬ್ಲೀಗ್ ಮಾಡಲು ಕೂಡ ಆರಂಭಿಸಿದರು. ಅದರ ಪರಿಣಾಮವಾಗಿ 62 ಜನರು ಅಹ್ಮದಿಯರಾದರು. ಅವರು ಅಹ್ಮದಿಯರಾಗಲು ಖ಼ಲೀಫ ಮತ್ತು ಖ಼ಿಲಾಫತ್ ವ್ಯವಸ್ಥೆ ಬಹಳ ದೊಡ್ಡ ಕಾರಣವಾಗಿತ್ತು. ಅನಂತರ ಅವರ ತಬ್ಲೀಗ್‌ನಿಂದ ಜಮಾಅತ್ ಸಾಕಷ್ಟು ವರ್ಧಿಸಿತು.

ಕಾಂಗೋಕನ್ಸಾಸದ ಅಮೀರ್ ಸಾಹಿಬ್ ಬರೆಯುತ್ತಾರೆ: ಕಾಂಗೋದಲ್ಲಿ ಜಮಾಅತಿನ ರೇಡಿಯೋ ಸ್ಟೇಶನ್ ಅಲ್ಲದೇ 23 ವಿವಿಧ ರೇಡಿಯೋ ಸ್ಟೇಶನ್‌ಗಳಲ್ಲಿ ತರ್‌ಬಿಯತ್, ತಬ್ಲೀಗ್ ಕಾರ್ಯಕ್ರಮಗಳು ಮತ್ತು ಜುಮಾ ಖುತ್ಬಗಳು ಪ್ರಸಾರ ಮಾಡಲಾಗುತ್ತವೆ. ಒಬ್ಬ ಪ್ರಾದೇಶಿಕ ಕ್ರೈಸ್ತ ಡಾಕ್ಟರ್ ಹೇಳುತ್ತಾರೆ: ನಾನು ಖುತ್ಬಗಳನ್ನು ನಿಯತವಾಗಿ ಆಲಿಸುತ್ತೇನೆ. ಹೆಚ್ಚಿನ ಜನರು ಪ್ರಯೋಜನ ಪಡೆಯುವಂತಾಗಲು ಪ್ರಾದೇಶಿಕ ಭಾಷೆಯಲ್ಲಿ ಇದನ್ನು ಅನುವಾದಿಸಿರಿ ಎಂದು ನಾನು ವಿನಂತಿಸುತ್ತೇನೆ. ಅಲ್ಲಾಹನು ಈ ರೀತಿಯಾಗಿ ಇಸ್ಲಾಂ ಮತ್ತು ಅಹ್ಮದಿಯ್ಯತ್ತಿನ ಸಂದೇಶವನ್ನು ತಲುಪಿಸಲಿಕ್ಕಾಗಿ ಏರ್ಪಾಡು ಮಾಡುತ್ತಿದ್ದಾನೆ.

(ಟ್ರಿನಿಡಾಡ್, ಕಿರ್ಗಿಸ್ತಾನ್, ಪೇರಾಗ್ವೆ ಮತ್ತು ಬಾಂಗ್ಲಾದೇಶದ ಕೆಲವು ಘಟನೆಗಳನ್ನು ಕೂಡ ವಿವರಿಸಿದ ನಂತರ ಹುಝೂರ್ ಹೇಳಿದರು:) ಒಂದು ಸಮಯದಲ್ಲಿ ಅವರ ಹೃದಯಗಳು ಕೂಡ ತೆರೆಯಲ್ಪಡುವುವು ಮತ್ತು ಅವರು ಅಹ್ಮದಿಯ್ಯತ್ತನ್ನು ಅರಿಯುವಂತಾಗುವರು ಹಾಗೂ ಖ಼ಿಲಾಫತಿನ ವರದಾನಗಳು ಮುಂದುವರೆಯುವುವು.

ಅಹ್ಮದಿಯಾ ಖ಼ಿಲಾಫತಿನ ಮೇಲೆ ಅಲ್ಲಾಹನ ಸಹಾಯಗಳಿಗೆ ಮತ್ತು ಹಝ್ರತ್ ಪೈಗಂಬರ್(ಸ)ರ ದಾಸ್ಯದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಆಗಮಿಸಿ ಲೋಕವನ್ನು ಒಂದು ಸಮುದಾಯವನ್ನಾಗಿ ಮಾಡಿದ್ದನ್ನು ಈ ಘಟನೆಗಳು ಸತ್ಯಪಡಿಸುತ್ತವೆ. ಪ್ರತಿಕೂಲ ಅವಸ್ಥೆಗಳು ಇದ್ದೂ ಕೇವಲ ಅಹ್ಮದಿಯಾ ಖ಼ಿಲಾಫತ್ ಲೋಕದಲ್ಲಿ ಇಸ್ಲಾಮಿನ ಪ್ರಗತಿಯ ಮತ್ತು ತಬ್ಲೀಗಿನ ಕೆಲಸವನ್ನು ಮಾಡುತ್ತದೆ. ಇದು ಅಲ್ಲಾಹನ ಕೃತಿರೂಪದ ಸಾಕ್ಷ್ಯಕ್ಕಿರುವ ಪುರಾವೆಯಾಗಿದೆ.

ಅಲ್ಲಾಹನ ವಾಗ್ದಾನಗಳು ಮತ್ತು ಹಝ್ರತ್ ಪೈಗಂಬರ್(ಸ)ರ ಭವಿಷ್ಯವಾಣಿಯ ಪ್ರಕಾರ **ಖ಼ಿಲಾಫತ್ ಅಲಾ ಮಿನ್‌ಹಾಜುನ್ನುಬುವ್ವತ್** ಖಿಯಾಮತ್ ತನಕ ಜಾರಿಯಲ್ಲಿರುವುದು. ಅದು ಸದಾ ನೆಲೆನಿಲ್ಲುವುದು. ಯಾವನೇ ಶತ್ರುವಿಗೆ ಅದಕ್ಕೆ ಕಿಂಚಿತ್ತೂ ಹಾನಿಯನ್ನು ಉಂಟುಮಾಡಲು ಸಾಧ್ಯವಲ್ಲ. ಆದ್ದರಿಂದ ತಮ್ಮ ವಿಶ್ವಾಸಗಳಲ್ಲಿ ಹೊಳಪು ಉಂಟುಮಾಡಿರಿ, ತಮ್ಮನ್ನು ಸ್ವತಃ ಖ಼ಿಲಾಫತಿನೊಂದಿಗೆ ಜೋಡಿಸಿಡಿರಿ ಮತ್ತು ಅದಕ್ಕಾಗಿ ಯಾವುದೇ ತ್ಯಾಗವನ್ನು ಮಾಡಲು ಹಿಂಜರಿಯಬೇಡಿರಿ. ಅಲ್ಲಾಹನು ಅದರ ಸೌಭಾಗ್ಯವನ್ನು ನೀಡಲಿ. ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, **‘Masjid Mubarak’,** Islamabad, Tilford, UK. On 26-05-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha’at Team for Nazarath Nashr-O-Isha’ath, Qadian



***Email**: khutuba.kannada@gmail.com*



**You can find all the Sermons archived at**: www.alislam.org/friday-sermon